# ಕಾಲಕ್ಕೆ ಕನ್ನಡಿ

ಸಾಹಿತ್ಯ, ಕಲೆಯ ಕುರಿತಂತೆ ಒಳನೋಟಗಳಿಂದ ಕೂಡಿದ ನಿಖರ, ಪ್ರಖರ ಮಾತುಗಳನ್ನು ಆಡುವವರು ಈ ಕಾಲದಲ್ಲಿ ಕಡಿಮೆಯಾಗುತ್ತಿದ್ದಾರೆ. ಈ ಸಂಚಿಕೆಯಲ್ಲಿ ವಿಮರ್ಶಕ ಬಸವರಾಜ ಕಲ್ಗುಡಿ ಅವರ ಸಂದರ್ಶನವನ್ನು ಕೊಡಲಾಗಿದೆ. ಸಂದರ್ಶನದಲ್ಲಿ ಕಲ್ಗುಡಿ ಅವರು ನಮ್ಮ ಸಾಹಿತ್ಯದ ಕೆಲವು ಅಂಶಗಳ ಬಗ್ಗೆ ಮಹತ್ವದ ಮಾತುಗಳನ್ನು ಆಡಿದ್ದಾರೆ. ಅವರ ಬಹುಮುಖಿ ಚಿಂತನೆಯ ಹೊಳಹುಗಳು ಸಂದರ್ಶನದ ತುಂಬ ಇಡಿಕಿರಿದಿವೆ. ಸಂಶೋಧನೆ, ವಿದ್ವತ್ತು, ಸೂಕ್ಷ್ಮಗ್ರಹಿಕೆ, ಸಹೃದಯ ವಿಮರ್ಶೆಯಿಂದ ಕೂಡಿರುವ ಅವರ ಸಮತೋಲಿತ ವಿಚಾರಗಳು ಅಪೂರ್ವವಾಗಿವೆ. ಸಾಹಿತ್ಯವನ್ನು ಭಿನ್ನ ನೋಟದಿಂದ ನೋಡಲು, ಅರ್ಥಮಾಡಿಕೊಳ್ಳಲು ನಮ್ಮನ್ನು ಪ್ರೇರೇಪಿಸುತ್ತವೆ. 'ವಿಮರ್ಶೆಯೂ ಒಂದು ಉದ್ದೀಪನ, ಉನ್ಮಾದ, ಧ್ಯಾನ ಅಂತಲೇ ತಿಳಕೊಂಡಿದ್ದೀನಿ. ಈ ಕಾಪಿ ಪೇಸ್ಟ್ ವಿಮರ್ಶಕರು, ಮೀಡಿಯೋಕರ್‌ಗಳು, ಅಸೂಕ್ಷ್ಮಜ್ಞರನ್ನು ಕಂಡಾಗ ಬೇಸರವಾಗುತ್ತೆ. ಎಲ್ಲಾ ಕಾಲಕ್ಕೂ ಸೂಕ್ಷ್ಮಜ್ಞರ ಸಂಖ್ಯೆ ಕಡಿಮೆಯೆ. ಸೂಕ್ಷ್ಮಜ್ಞರನ್ನು ಹುಡುಕುವುದು, ಬೆಳೆಸುವುದು ಒಂದು ಸಂಸ್ಕೃತಿಯ ಜವಾಬ್ದಾರಿಯಾಗಬೇಕು. ಸೂಕ್ಷ್ಮಜ್ಞರನ್ನು ನಾಶಮಾಡುವುದಲ್ಲ. ಹಾಗೆ ಮಾಡುತ್ತ ಹೋದರೆ ಯಾವ ವಿಮರ್ಶೆಯೂ ಸಾಧ್ಯವಿಲ್ಲ, ಯಾವ ಸಂಸ್ಕೃತಿಯೂ ಉಳಿಯುವುದಿಲ್ಲ' ಎಂಬ ನಮ್ಮನ್ನು ಎಚ್ಚರಿಸುವ, ಈ ಕಾಲಕ್ಕೆ ಬೇಕಾದ ಅವರ ಮಾತುಗಳು ಸಾಹಿತ್ಯದ ವಿದ್ಯಾರ್ಥಿಗಳ ಕಣ್ಣನ್ನು ತೆರೆಸಬಹುದು. ಕಲ್ಗುಡಿ ಅವರಂತಹ ಸಂವೇದನಾಶೀಲ ಚಿಂತಕರ ಮಾತುಗಳಿಗೆ ಕಿವಿಗೊಡಬೇಕಾದ ಅಗತ್ಯ ಎಂದಿಗಿಂತಲೂ ಇಂದು ಹೆಚ್ಚಿದೆ.



ಎಂ.ಎಸ್. ಮೂರ್ತಿ

/ಕನ್ನಡ ಭಾಷೆ ಬಹುಕಾಲದಿಂದ ಬೇರೆ ಭಾಷೆಗಳಿಂದ ಸಾಹಿತ್ಯ ಕೃತಿಗಳ ಅನುವಾದಗಳನ್ನು ಮಾಡಿಕೊಂಡು ಬಂದಿದೆ./ ಅದು ಭಾಷೆಯೊಂದರ ಜೀವಂತಿಕೆಯನ್ನು, ಕ್ರಿಯಾಶೀಲತೆಯನ್ನು ತೋರುತ್ತದೆ. ಕನ್ನಡದಲ್ಲಿ ಅನುವಾದದ ಸಾಂಸ್ಕೃತಿಕ ಮಹತ್ವವನ್ನು, ತುರ್ತನ್ನು ಗಮನದಲ್ಲಿಟ್ಟುಕೊಂಡು 'ಮಯೂರ' ಕೇಳಿದ ಪ್ರಶ್ನೆಗಳಿಗೆ ನಮ್ಮ ಅನುವಾದಕರು ಕೊಟ್ಟ ಉತ್ತರಗಳು ಭಾಷಾಂತರದ ಹಲವು ಮಗ್ಗುಲುಗಳನ್ನು, ಅದರ ವರ್ತಮಾನವನ್ನು ಕಾಣಿಸುತ್ತವೆ. ಭಾಷಾಂತರದ ಅಂತರಂಗವನ್ನು ತೋರುವ 'ಅನುವಾದ ಅನುಸಂಧಾನ' ಈ ಸಂಚಿಕೆಯ ವಿಶೇಷವಾಗಿದೆ.

ಕವಿ ಪಂಪನ ಕಾವ್ಯಗಳ ಓದಿನ ಕುರಿತ ಸಕಾಲಿಕ ಲೇಖನ 'ನಮ್ಮ ಕಾಲದ ಸಮಸ್ಯೆಗಳು ಮತ್ತು ಪಂಪ' ಈ ಸಂಚಿಕೆಯ ಮತ್ತೊಂದು ವಿಶೇಷವಾಗಿದೆ. ನಾಡಿನ ಸಂವೇದನಾಶೀಲ ಲೇಖಕ, ಅನುವಾದಕ ಎಚ್.ಎಸ್. ರಾಘವೇಂದ್ರ ರಾವ್ ತಮ್ಮ ಲೇಖನದಲ್ಲಿ ಈ ಕಾಲದಲ್ಲಿ ಮಾಡಬೇಕಾದ ಪಂಪನ ಕಾವ್ಯ ಓದು ಮತ್ತು ಅದರ ಮೂಲಕ ಅವನನ್ನು ಒಳಗೊಳ್ಳುವ ಬಗೆಗಳನ್ನು ಚರ್ಚಿಸಿದ್ದಾರೆ.

ಕಾಲಕ್ಕೆ ತಕ್ಕಂತೆ ಎಲ್ಲವೂ ಬದಲಾಗುತ್ತ ಇರುತ್ತದೆ. ಬದಲಾವಣೆ ಎಂಬುದು ಎಂದೂ ಬದಲಾಗದ ಜಗತ್ತಿನ ಶಾಶ್ವತ ನಿಯಮ. ಬದಲಾಗುತ್ತಿರುವ ಸಾಹಿತ್ಯ, ವಿಚಾರಗಳಿಗೆ ಸ್ಪಂದಿಸುತ್ತ ಬಂದಿರುವ 'ಮಯೂರ' ಅವುಗಳಿಗೆ ಕನ್ನಡಿಯಾಗಿದೆ. ಅವು ಆಯಾ ಕಾಲಕ್ಕೆ ಪತ್ರಿಕೆಯಲ್ಲಿ ದಾಖಲಾಗುತ್ತ ಬಂದಿವೆ. ಭಿನ್ನ ಶೈಲಿಯ ಕತೆ, ಪ್ರಬಂಧ, ಲೇಖನಗಳನ್ನು ಈ ಸಂಚಿಕೆ ಒಳಗೊಂಡಿದೆ. ಇಲ್ಲಿ ಪ್ರಕಟವಾಗಿರುವ ಹೊಸ ಸಂವೇದನೆಯ, ನುಡಿಗಟ್ಟಿನ ಬರಹಗಳು ಓದುಗರನ್ನು ಖುಷಿಗೊಳಿಸಬಹುದು ಎಂಬುದು ನಮ್ಮ ನಿರೀಕ್ಷೆ.

**ಮಯೂರ ಬಳಗ**